Regd No BG 155 19-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು 1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಡಿಸೆಂಬರ್ ಎರಡನೇ ವಾರದಲ್ಲಿ ಎಂಪಿಸಿಸಿ

ವಿಗ್ರಹ ಪೋಲೀಸರ ವಶದಲ್ಲಿ

5 ಶತಮಾನಗಳಿಂದಲೂ ಗುಳೂರು ಹೋಬಳಿ ಕಲ್ಲುನಟ್ಟ ಗ್ರಾಮದಲ್ಲಿ ದೇವಾಲಯದಲ್ಲಿದ್ದ 7 ವರೆ ಅಡಿ ಎತ್ತರದ ಸುಂದರವಾದ ವೀರಭದ್ರಸ್ವಾಮಿಯ ಶಿಲಾ ವಿಗ್ರಹವು ತುಂಕೂರು ಪೋಲೀಸರ ಸ್ವಾಧೀನದಲ್ಲಿದೆ – ಪೂಜಾ ಹಕ್ಕು ಬಗ್ಗೆ ಜಗಳ ಹುಟ್ಟಿ ಆಪರಾಧಿಗಳು ವಿಗ್ರಹವನ್ನು ಬೇರೆಕಡೆಗೆ ಸಾಗಿಸಿದ್ದನ್ನು ಪೋಲೀಸರು ತಂದು ಮೊಖದ್ದಮೆ ಫೈಸಲಾಗುವವರಿಗೆ ತಮ್ಮ ವಶದಲ್ಲಿಟ್ಟುಕೊಂಡಿರುವರು.

★

ಕಂಪ್ಯೂಟರ್

ಬೆಂಗಳೂರು— ಕಂಪ್ಯೂಟರು ಪದ್ಧತಿಯನ್ನು ವಿಚಾರಪೂರ್ವಕವಾಗಿ ಉಪಯೋಗಿಸಬೇಕೆಂದೂ, ಉದ್ಯೋಗಾವಕಾಶಗಳಿಗೆ ತೊಂದರೆಯಾಗಿಬಾರದೆಂದೂ, ಗವರ್ನರ್ ಶ್ರೀ ಧರ್ಮ ವೀರ್ ರವರು ಈ ಸಂಬಂಧದ ಸೆಮಿನಾರನ್ನು ಉದ್ಘಾಟಿಸುತ್ತಾ ಹೇಳಿದರು.

★

ಸ್ವಾರಸ್ಯ ವಿಷಯ

ನವದೆಹಲಿ— ಕಾಂಗ್ರೆಸ್ಸು ಆಡಳಿತ ಪಕ್ಷವಾಗಿಯೂ, ವಿರೋಧ ಪಕ್ಷವಾಗಿಯೂ ಇರುವದನ್ನು ಲೋಕಸಭೆಯಲ್ಲಿ ಟೀಕಿಸಲಾಯಿತು.

★

ಸ್ಕೂಟರುಗಳು

ನವದೆಹಲಿ— 73–74 ರ ಹೊತ್ತಿಗೆ 2 ಲಕ್ಷ ಸ್ಕೂಟರುಗಳ ಕೇಳಿಕೆ ಬರುವ ಸಂಭವವಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಮೈಸೂರು ಕಾಂಗ್ರೆಸ್

ಬೆಂಗಳೂರು— ತಮ್ಮ ಜೊತೆಯಲ್ಲಿಲ್ಲದ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಪ್ರಧಾನಿ ಮತ್ತು ಅವರ ಜೊತೆಗಾತರು ಉರುಳಿಸಲು ಪ್ರಯತ್ನಿಸುತ್ತಿರುವರೆಂಬ ಡೆಲ್ಲಿಯಿಂದ ವಾಪಸ್ಸು ಬಂದ ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು ಹೇಳಿದರು – ಮೈಸೂರು ಕಾಂಗ್ರೆಸ್ ಭದ್ರವಾಗಿಯೂ ಐಕ್ಯವಾಗಿಯೂ ಮುಂದುವರಿಯುವದೆಂಬ ತಮ್ಮ ಭರವಸೆಯನ್ನು ವ್ಯಕ್ತಪಡಿಸಿದರು – ಮೈಸೂರು ಕಾಂಗ್ರೆಸ್ ನಿಜವಾದ ಕಾಂಗ್ರೆಸ್ಸಿನೊಡನೆ ಇರುವದೆಂದೂ ಶ್ರೀಮತಿ ಇಂದಿರಾ ಗಾಂಧಿಯವರ ಇವಿ ಟೀಕ್ ಕಾಂಗ್ರೆಸ್ ಜೊತೆಯಲ್ಲವೆಂದೂ ಹೇಳಿದರು – ತಾತ್ಕಾಲಿಕ ರಾಜಕೀಯ ಪರಿಸ್ಥಿತಿ ವಿಮರ್ಷಿಸಲು ಎಂ ಪಿ ಸಿ ಸಿ ಕಾರ್ಯಕಾರಿ ಸಮಿತಿ ಮತ್ತು ಜನರಲ್ ಬಾಡಿ ಮೀಟಿಂಗು ಡಿಸೆಂಬರು ಎರಡನೇ ವಾರದಲ್ಲಿ ನಡೆಯುವುದೆಂದು ಹೇಳಿದರು.

●

ಮುಖ್ಯ ಮಂತ್ರಿಗಳ ಘೇರಾವೋ

ಜಲಪೈಗುರಿ — ಮಂಡಲಘಟ್ಟನಲ್ಲಿ ಈಚಿನ ತಿಸ್ತಾನದಿಯ ನೆರೆಹಾವಳಿಯಲ್ಲಿ ತೊಂದರೆಗೀಡಾದ ಬಹುಮಂದಿ ಮುಖ್ಯಮಂತ್ರಿ ಅಜಾಯ್ ಘೋಷರನ್ನು ಘೇರಾವೋ ಮಾಡಿದರು – ಕೂಡಲೆ ಪರಿಹಾರ ನೀಡುವ ಮತ್ತು ನೆರೆಹಾವಳಿಯಾಗದಂತೆ ಪ್ರತಿಬಂಧಿಸುವ ಕಾರ್ಯ ಕೈಗೊಳ್ಳುವ ಭರವಸೆ ಪಡೆಯಲು ಈ ಕಾರ್ಯ.

○

ಒಪ್ಪಂದವಾಗಲಿಲ್ಲ

ನವದೆಹಲಿ— ಭಾರತದಿಂದ ರಷ್ಯಾ ಕೊಳ್ಳಬೇಕೆಂದಿರುವ ವ್ಯಾಗ್ಗನ್‌ಗಳ ಬಗ್ಗೆ ಬೆಲೆಯ ವಿಷಯದಲ್ಲಿ ಯಾವ ಒಪ್ಪಂದವೂ ಆಗದೆ ರಷ್ಯಾ ನಿಯೋಗ ವಾಪಸ್ಸಾಯಿತು.

ಮೈಸೂರು-ಮಹಾರಾಷ್ಟ್ರ ಗಡಿ

ನಾಗಪುರ— ಮೈಸೂರು – ಮಹಾರಾಷ್ಟ್ರ ಗಡಿ ವ್ಯಾಜ್ಯದ ವ್ಯವಸ್ಥೆಗೆ ಡೆಲ್ಲಿಯಲ್ಲಿ ಹಿತವಾದ ವಾತಾವರಣ ಒದಗಿದೆಯೆಂದೂ ವಿವರಿಸಿದ ತತ್ವಗಳ ಮೇಲೆ ಪಾರ್ಲಿಮೆಂಟು ಮಟ್ಟದಲ್ಲಿ ವ್ಯವಸ್ಥೆಯಾಗಬೇಕೆಂದೂ, ತಾವು ಕೇಂದ್ರವನ್ನು ಶೀಘ್ರ ವ್ಯವಸ್ಥೆಗೆ ಒತ್ತಾಯ ಮಾಡುವುದಾಗಿಯೂ ಮುಖ್ಯ ಮಂತ್ರಿ ಶ್ರೀ ನಾಯಿಕ್ ಶಾಸನಸಭೆಯಲ್ಲಿ ಹೇಳಿದರು.

★

ಸಮನ್ಸ್ ಬದಲು ಆಹ್ವಾನ

ನವದೆಹಲಿ— ಲೋಕಸಭೆಯಲ್ಲಿ ಸದಸ್ಯರು ಸರ್ವಮಾಡಲ್ಪಡುವುದರ ಬದಲು ಇನ್ನು ಮುಂದೆ ಆಹ್ವಾನಿಸಲ್ಪಡಬೇಕೆಂಬ ಶ್ರೀ ನಾಥ್ ಪೈ ರ ಹೇಳಿಕೆಗೆ ಸ್ಪೀಕರ್ ಒಪ್ಪಿದರು.

●

ಆಸ್ಟ್ರೇಲಿಯಾ ಗೋಧಿ

ನವದೆಹಲಿ— ಆಸ್ಟ್ರೇಲಿಯವು ಭಾರತಕ್ಕೆ ಸುಮಾರು ಮೂರು ಕೋಟಿ ರೂ. ಬೆಲೆಯ 70 ಸಹಸ್ರ ಮೆಟ್ರಿಕ್ ಟನ್‌ಗಳಷ್ಟು ಗೋಧಿಯನ್ನು ಕಾಣಿಕೆಯಾಗಿ ನೀಡಿದೆ.

★

ಭಾವಚಿತ್ರ ಸುಟ್ಟರು

ಕ್ವಿಲೋನ್— ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಕೇರಳದ ವಿದ್ಯಾರ್ಥಿಗಳ ಸಂಘದ ಕಾರ್ಯಕರ್ತರ ಗುಂಪು ಕಾಮರಾಜರ ಮತ್ತೋರ್ವ ನಾಯಕರ ಭಾವಚಿತ್ರಗಳನ್ನು ಹೊರಕ್ಕೆ ತಂದು ಸುಟ್ಟುಹಾಕಿದರು.

★

ಚಂಡೀಘರ್

ನವದೆಹಲಿ— ಚಂಡೀಘರದ ಭವಿಷ್ಯದ ಬಗ್ಗೆ ಸರಕಾರವು ಪಾರ್ಲಿಮೆಂಟು ಬಜೆಟ್ ಅಧಿವೇಶನಕ್ಕೆ ಮುಂಚೆ ತಿಳಿಸುವಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ವಶಪಡಿಸಿಕೊಂಡ ಪದಾರ್ಥಗಳು

ನವದೆಹಲಿ— 1969 ರ ಏಪ್ರಿಲ್‌ನಿಂದ ಸೆಪ್ಟಂಬರ್‌ವರೆಗೆ ದೇಶದ ವಿವಿಧ ಭಾಗಗಳಲ್ಲಿ ರೂ. 140 ಲಕ್ಷ ಮೌಲ್ಯದ ಚಿನ್ನ ರೂ. 44 ಲಕ್ಷ ಭಾರತ ಮತ್ತು ವಿದೇಶೀ ಹಣ, ರೂ 98 ಲಕ್ಷ ಇತರ ಪದಾರ್ಥಗಳು ವಶಪಡಿಸಿಕೊಳ್ಳಲಾಯಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

●

ಮಹರ್ಷಿ ಮಹೇಶಯೋಗಿ ದುಸ್ಥಿತಿ

ನವದೆಹಲಿ— ಮಹರ್ಷಿ ಮಹೇಶಯೋಗಿ, ರಿಜರ್ವ್ ಬ್ಯಾಂಕ್ ಅಪ್ಪಣೆ ಇಲ್ಲದೆ ಹೊರದೇಶದಲ್ಲಿ ಲೆಖ್ಖವಿಟ್ಟಿರುವ ಬಗ್ಗೆ ಕ್ರಮ ಏಕೆ ತೆಗೆದುಕೊಳ್ಳಬಾರದೆಂದು ನೋಟೀಸು ಕೊಡಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು – ಇವರ ಲಂಡನ್ನಿನಲ್ಲಿ 14000 ಪೌಂಡುಗಳಿಗೆ ಹಳದಿ ರಾಲ್ಸ್ ರಾಯ್ಸ್ ಕಾರನ್ನು ಕೊಂಡುಕೊಂಡರೆಂದು ಆಪಾದಿಸಲಾಗಿದೆ.

★

ಆಕಾಶದಲ್ಲಿ ವಜ್ರ

ಬರ್ಕಲೇ— ಆಕಾಶದಲ್ಲಿ ಸಣ್ಣಸಣ್ಣ ವಜ್ರಗಳಿರುವ ಮೋಡಗಳಿರಬಹುದೆಂದು ರೇಡಿಯೊ ಖಗೋಳಶಾಸ್ತ್ರಜ್ಞ ಡಾ॥ ಕುಡಬಕ್ ಅಭಿಪ್ರಾಯ ಪಟ್ಟಿರುವರು.

"Bank Road Bahusar – A Fair Price Shop in Actual Practice"

ಭಾರತಕ್ಕೆ ಸಾಲ

ನವದೆಹಲಿ— ನೆದರ್ಲೆಂಡು ಭಾರತಕ್ಕೆ ಶೇಕಡಾ 2.5 ಬಡ್ಡಿಯ 30 ವರ್ಷಗಳಲ್ಲಿ ತೀರಿಸುವ ರೂ 16 ಕೋಟಿ ಸಾಲವನ್ನು ಕೊಡುವುದಾಗಿ ತಿಳಿಸಿದೆ.

ಸ್ವಹಿತಸಾಧಕರು

ನವದೆಹಲಿ— ಕಾಂಗ್ರೆಸ್ ಪಾರ್ಟಿಯಲ್ಲಿ ಸ್ವಹಿತಸಾಧಕರನ್ನು ಮಟ್ಟಾಹಾಕಲಾಗುವುದೆಂದು ಪ್ರಧಾನಿ ಇಂದಿರಾರವರು ಹೇಳಿದರು.

ಜಂಬೂನ್ನಾ ರೇಸಿಸ್

ಮೈಸೂರು—ಭಾನುವಾರ ರೇಸಿಸ್‌ನಲ್ಲಿ ಫಸ್ಟ್ ಡಬ್ಬಲ್‌ನಲ್ಲಿ ಒಂದು ಟಿಕೀಟಿಗೆ ರೂ 313 ದೊರೆಯಿತು— ಟ್ರಿಬಲ್ ಈವೆಂಟಿನಲ್ಲಿ ನಾಲ್ಕು ಟಿಕೀಟುಗಳಿಗೆ ತಲಾ ರೂ. 212 ದೊರೆತವು.

ಒಂದು ಸಲಹೆ

ಬೆಂಗಳೂರು— ರಾಷ್ಟ್ರದ ಮತ್ತು ಭದ್ರವಾದ ಸರಕಾರದ ಹಿತಕ್ಕಾಗಿ ಬಹುಸಂಖ್ಯಾತ ಗುಂಪಿನೊಡನೆ ಅಲ್ಪ ಸಂಖ್ಯಾತಗುಂಪು ಸಹಕರಿಸಬೇಕೆಂದು ಶ್ರೀ ಕಡಿದಾಳ ಮಂಜಪ್ಪ ಹೇಳಿದರು.

ತಮ್ಮ ಬೆಂಬಲಿಗರಿಗೆ ಕರೆ

ನವದೆಹಲಿ— ಪಾರ್ಲಿಮೆಂಟು ರಾಜಕೀಯ, ಹಾಗೂ ಆರ್ಥಿಕ ಮತ್ತಿತರ ವಿಷಯಗಳಲ್ಲಿ ಬಹಳ ಕಠಿಣವಾಗಿರುವುದೆಂದೂ, ತಮ್ಮ ಬೆಂಬಲಿಗರೆಲ್ಲರೂ ತಪ್ಪದೇ ಹಾಜರಾಗಬೇಕೆಂದೂ ಪ್ರಧಾನಿ ತಿಳಿಸಿದರು.

ದಿವ್ಯವಾಣಿ

ಆತ್ಮಶುದ್ಧಿಯೇ ಸರ್ವಶ್ರೇಷ್ಠವಾದದ್ದು. — ಗಾಂಧೀಜಿ

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ತಾ.14-11-69 ರಿಂದ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —

ಹ ಮ್ ಸಾ ಯ

ಪಾತ್ರ : ಮೂಲಾಸಿನ್ಹ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸ್ವರಸಂಗೀತ : ಓ. ಪಿ. ನಯ್ಯರ್

[ದಿನ 3 ಪ್ರದರ್ಶನಗಳು]

ಆಪೆರಾ— 14-11-69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ವೇಟ್ಟೈಕಾರನ್

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore 4